ಮೆ: ಮಾರವಾ ಮೈನಿಂಗ್ ಕಂಪನಿ, ರವರು ಜಿಗಿನಹಳ್ಳಿ ಮ್ಯಾಂಗನೀಸ್ ಗಣಿಗಾರಿಕೆ ಮಾಡಲು ಜಿಗಿನಹಳ್ಳಿ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 22.45 ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 5 ವರ್ಷಗಳ ಯೋಜನಾ ಅವಧಿಗೆ ವರ್ಷಕ್ಕೆ 0.2688 ಮಿಲಿಯನ್ ಟನ್‌ಗಳಷ್ಟು ಮ್ಯಾಂಗನೀಸ್ ಮೈನ್ ಗಣಿಗಾರಿಕೆಯ ಪ್ರಸ್ತಾವನೆಯನ್ನು ಮಾಡುವ ಉದ್ದೇಶಕ್ಕಾಗಿ (ಯೋಜನಾ ಪ್ರದೇಶದಲ್ಲಿ) ದಿನಾಂಕ: 29-03-2022 ರಂದು ಬೆಳಿಗ್ಗೆ 11.00 ಗಂಟೆಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು:-

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಉದ್ದೇಶಿತ ಯೋಜನಾ ಸ್ಥಳ ಮೆ:ಮಾರವಾ ಮೈನಿಂಗ್ ಕಂಪನಿ, ಜಿಗಿನಹಳ್ಳಿ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ. |
| ಹಾಜರಿದ್ದ ಪರಿಸರ ಸಾರ್ವಜನಿಕ ವಿಚಾರಣಾ ಸಮಿತಿಯ ಸದಸ್ಯರುಗಳ ವಿವರ | | **ಪದನಾಮ** |
| 1. | ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ | **ಅಧ್ಯಕ್ಷರು** |
| 2 | ಶ್ರೀ ದೊಡ್ಡಶಾಣಯ್ಯ, ಪರಿಸರ ಅಧಿಕಾರಿ & ಹಿರಿಯ ಪರಿಸರ ಅಧಿಕಾರಿಗಳು (ಪ್ರಭಾರ) ಕ.ರಾ.ಮಾ.ನಿ.ಮಂ.ಪ್ರಾದೇಶಿಕ ಕಛೇರಿ, ಬಳ್ಳಾರಿ | **ಸದಸ್ಯ ಸಮಾವೇಷಕರು** |

| | |
|---|---|
| **ಹಾಜರಿದ್ದ ಇತರ ಅಧಿಕಾರಿಗಳ ವಿವರ** | |
| 1 | ಶ್ರೀ ಹನುಮಂತಪ್ಪ ಹೆಚ್. ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾಕ, ಬಳ್ಳಾರಿ |
| 2 | ಶ್ರೀ ಕಿರಣ್‌ಕುಮಾರ್, ಪೋಲೀಸ್ ಸಬ್‌ಇನ್ಸಪೇಕ್ಟರ್. ಚೋರನೂರು |
| 3 | ಶ್ರೀ ಎ.ಎರ್ರಿಸ್ವಾಮಿ, ಕಂದಾಯ ನೀರಕ್ಷಕರು |
| 4 | ಶ್ರೀ ಮೂರಡಬಸಪ್ಪ.ಹೆಚ್. ಗ್ರಾಮ ಲೆಕ್ಕಾಧಿಕಾರಿ, ಜಿಗಿನಹಳ್ಳಿ ಗ್ರಾಮ |
| 5 | ಶ್ರೀ ಬಿ.ಎಸ್.ಶರಣಪ್ಪ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಯರ್ರಯ್ಯನಹಳ್ಳಿ |
| 6 | ಶ್ರೀ ಶಿವಮೂರ್ತಿ ಎಮ್.ಡಾಟಾ ಎಂಟ್ರಿ ಆಪರೇಟರ್, ಯರ್ರಯ್ಯನಹಳ್ಳಿ |
| ಮೆ: ಮಾರವಾ ಮೈನಿಂಗ್ ಕಂಪನಿ, ಉದ್ದಿಮೆಯ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು. | |
| 1. | ಶ್ರೀ ಪವನ ಕುಮಾರ.ಕೆ. ವ್ಯವಸ್ಥಾಪಕರು |
| 2. | ಶ್ರೀ ವೆಂಕಟರಾವ್ ಕೆ. ವ್ಯವಸ್ಥಾಪಕರು |
| 3. | ಶ್ರೀ ಮಾರ್ಕಂಡೇಯಲು-ಪೊರ್‌ಮನ್ |
| 4. | ಶ್ರೀ ಸಿದ್ದಪ್ಪ, ಮೇಲ್ವಿಚಾರಕರು |
| 5 | ಶ್ರೀ ಬಿ.ಎರ್ರಿಸ್ವಾಮಿ, ಮೇಲ್ವಿಚಾರಕರು |
| 6 | ಶ್ರೀ ಸಿತರಾಮ ಕಮ್ಮಣ್ಣು, ಕನ್ಸಲ್ಟೆಂಟ್, ಹಾರಿಜಾನ್ ವೆಂಚರ್ಸ್, ಬೆಂಗಳೂರು |
| 7 | ಶ್ರೀ ಸಚಿನ್.ಎಮ್.ವಿ. ಕನ್ಸಲ್ಟೆಂಟ್. ಹಾರಿಜಾನ್ ವೆಂಚರ್ಸ್, ಬೆಂಗಳೂರು |
| 8 | ಶ್ರೀ ಅರುಣ ಕನ್ಸಲ್ಟೆಂಟ್, ಹಾರಿಜಾನ್ ವೆಂಚರ್ಸ್, ಬೆಂಗಳೂರು |

| | |
|---|---|
| 9 | ಶ್ರೀ ಸತೀಶ್, ಕನ್ಸಲ್ಟೆಂಟ್, ಹಾರಿಜಾನ್ ವೆಂಚರ್ಸ್, ಬೆಂಗಳೂರು |

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.
2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

ಪೀಠಿಕೆ

ಮೆ: ಮಾರವಾ ಮೈನಿಂಗ್ ಕಂಪನಿ, ರವರು ಜಿಗಿನಹಳ್ಳಿ ಮ್ಯಾಂಗನೀಸ್ ಗಣಿಗಾರಿಕೆ ಮಾಡಲು ಜಿಗಿನಹಳ್ಳಿ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 22.45 ಹೆಕ್ಟೇರ್ ಪ್ರದೇಶದಲ್ಲಿ ಒಟ್ಟು 5 ವರ್ಷಗಳ ಯೋಜನಾ ಅವಧಿಗೆ ವರ್ಷಕ್ಕೆ 0.2688 ಮಿಲಿಯನ್ ಟನ್‌ಗಳಷ್ಟು ಮಾಂಗನೀಸ್ ಮೈನ್ ಗಣಿಗಾರಿಕೆಯ ಪ್ರಸ್ತಾವನೆಯನ್ನು ಮಾಡುವ ಉದ್ದೇಶಕ್ಕಾಗಿ ಪ್ರಸ್ತಾವನೆಯನ್ನು ಮಾಡಿರುತ್ತಾರೆ. ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿಯಲ್ಲಿ ದಿನಾಂಕ 14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ 01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆ ಅಡಿಯಲ್ಲಿ ಒಳಪಡುವುದರಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇವರು ಸದರಿ ಯೋಜನೆಯ ಟರ್ಮ್ಸ್ ಆಫ್ ರೆಫರೆನ್ಸ್ ಸಂಖ್ಯೆ : SEIAA 655 MIN 2021 ದಿನಾಂಕ : 05-01-2022 ರ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಹಾರಿಜಾನ್ ವೆಂಚರ್ಸ್, ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ದಿನಾಂಕ 11-01-2022 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 14-01-2022 ಪತ್ರದ ಮೂಲಕ ಕೋರಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಆದೇಶದನ್ವಯ ದಿನಾಂಕ: 29-03-2022 ರಂದು ಬೆಳಿಗ್ಗೆ 11.00 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ

ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಹೊಸ ದಿಗಂತ (ಕನ್ನಡ) ಹಾಗೂ ದಿ ಟೈಮ್ಸ್ ಆಫ್ ಇಂಡಿಯಾ (ಆಂಗ್ಲ) ಗಳಲ್ಲಿ ದಿನಾಂಕ 26-02-2022 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ಸಹ ದಿನಾಂಕ: 27-02-2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು, ನೀಡಲಾಗಿರುತ್ತದೆ.(ಅನುಬಂಧ-3) ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿತ್ತು.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ. ಬಳ್ಳಾರಿ,
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಬಳ್ಳಾರಿ.
- ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ.
- ತಹಶೀಲ್ದಾರರ ಕಾರ್ಯಾಲಯ, ಸಂಡೂರು
- ತಾಲ್ಲೂಕು ಪಂಚಾಯತಿ ಸಂಡೂರು.
- ಗ್ರಾಮ ಪಂಚಾಯತಿ ಕಾರ್ಯಾಲಯ, ಜಿಗಿನಹಳ್ಳಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ
- ವಿಭಾಗಿಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001

ಸದರಿ ಪರಿಸರ ಸಾರ್ವಜನಿಕ ಸಭೆಯ ಕುರಿತು ಮೇಲೆ ತಿಳಿಸಿದ ಎಲ್ಲಾ ಇಲಾಖೆಯವರಿಗೆ ಪರಿಸರ ಸಾರ್ವಜನಿಕ ಸಭೆ ನಡೆಯುತ್ತಿರುವ ಕುರಿತು ಹಾಗೂ ಪತ್ರಿಕಾ ಪ್ರಕಟಣೆ ಬಗ್ಗೆ ದಿನಾಂಕ: 28-02-2022 ರಂದು ಮಾಹಿತಿಯನ್ನು ನೀಡಲಾಗಿರುತ್ತದೆ.

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ 25-03-2022 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 29-03-2022 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು (ಅನುಬಂಧ-4ರಂತೆ ಲಗತ್ತಿಸಿದೆ)

ಮೇಲೆ ತಿಳಿಸಿದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ-ವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 29-03-2022 ರಂದು ಬೆಳಿಗ್ಗೆ 11.00 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು

ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ಯೋಜನಾ ಸ್ಥಳವಾದ ದೇವಗಿರಿ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು.

ಸಭೆಯ ನಡವಳಿಗಳು

ಸದಸ್ಯ ಸಮಾವೇಷಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬಳ್ಳಾರಿ ಪ್ರಾದೇಶಿಕ ಕಛೇರಿಯ ಹಿರಿಯ ಪರಿಸರ ಅಧಿಕಾರಿ (ಪ್ರಭಾರ) ಹಾಗೂ ಪರಿಸರ ಅಧಿಕಾರಿಗಳಾದ ಶ್ರೀ ದೊಡ್ಡಶಾಣಯ್ಯ ಅವರು ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಅವರಿಗೆ ಸ್ವಾಗತ ಕೋರಿದರು. ಮೆ:ಮಾರವಾ ಮೈನಿಂಗ್ ಕಂಪನಿಯ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಎಲ್ಲಾ ಸಾರ್ವಜನಿಕರಿಗೆ, ಪತ್ರಕರ್ತರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ ಸ್ವಾಗತ ಕೋರಿದರು ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ(ಸಂರಕ್ಷಣೆ)ಕಾಯ್ದೆ, 1986 ರಡಿಯಲ್ಲಿ ದಿನಾಂಕ : 14-09-2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧೀಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು ಹಾಗೂ ಸಾರ್ವಜನಿಕ ಆಲಿಕೆಯ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಕೋರಿದರು.

ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರು ಸಭೆಯನ್ನು ಉದ್ದೇಶಿಸಿ ಯೋಜನೆಗೆ ಪರಿಸರ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ: 14-09-2006 ರ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ವಿಚಾರಣೆಯ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಸ್ತಾವಿತ ಯೋಜನೆಯ ಪವರ್ ಪಾಯಿಂಟ್ ಪ್ರಸ್ತುತಿಯನ್ನು ನೀಡುವಂತೆ ಅವರು ಯೋಜನಾ ಪ್ರತಿಪಾದಕರಿಗೆ ಮಾಹಿತಿ ನೀಡಿದರು, ಅಲ್ಲಿ ವಿಚಾರಣೆಗೆ ಹಾಜರಿದ್ದ ಸಾರ್ವಜನಿಕರು ಪರಿಸರ ಸಮಸ್ಯೆಗಳ ಕುರಿತು ಉದ್ದೇಶಿತ ಯೋಜನೆಗೆ ತಮ್ಮ ಎಲ್ಲಾ ಅಭಿಪ್ರಾಯ/ಸಲಹೆ/ಪತ್ರಗಳನ್ನು ಯೋಜನೆಯ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ಪ್ರಸ್ತುತಪಡಿಸುವಂತೆ ವಿನಂತಿಸಿಕೊಂಡರು. ಈ ನಡವಳಿಯು ಲಿಖಿತ ದಾಖಲೆ ಮತ್ತು ವಿಡಿಯೋಗ್ರಾಫಿ ಎರಡನ್ನು ಒಳಗೊಂಡಿದೆ ಎಂದು ಸಭೆಗೆ ತಿಳಿಸಿದರು.

ಅದರಂತೆ, ಮೆ: ಮಾರವಾ ಮೈನಿಂಗ್ ಕಂಪನಿ ಪರವಾಗಿ ಶ್ರೀ ಸಿತರಾಮ ಕೆಮ್ಮಣ್ಣು, ಹಾರಿಜಾನ್ ವೆಂಚರ್ಸ್, ಬೆಂಗಳೂರು ರವರು ತಯಾರಿಸಿರುವ ಕ್ರಿಯಾತ್ಮಕ ಸಾರಾಂಶದಲ್ಲಿ ತಿಳಿಸಿರುವ ಕ್ರಮಗಳು, ಶಬ್ಧದ ಮಟ್ಟದ ಸುಧಾರಿತ ಕ್ರಮಗಳು, ನೀರಿನ ಗುಣಮಟ್ಟ ಸುಧಾರಿತ ಕ್ರಮಗಳು, ಗಾಳಿಯ ಗುಣಮಟ್ಟ ಸುಧಾರಿತ ಕ್ರಮಗಳು, ಮಣ್ಣಿನ ಗುಣಮಟ್ಟದ ಸುಧಾರಿತ ಕ್ರಮಗಳು, ಜಮೀನಿನ ಬಳಕೆ, ಸಸ್ಯೀಕರಣ ಪೋಟೊಗಳು, ಗಣಿ ಗುತ್ತಿಗೆ ಪ್ರದೇಶದೊಳಗಿನ ರಕ್ಷಣಾತ್ಮಕ ಕ್ರಮಗಳ ಪೋಟೊ, ಪರಿಸರ ರಕ್ಷಣೆಯ ಬಜೆಟ್ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು ಮತ್ತು ಉದ್ದಿಮೆಯ ಸಿ.ಎಸ್.ಆರ್. ಅಡಿಯಲ್ಲಿ ತೆಗೆದುಕೊಂಡಿರುವ ವಿವಿಧ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1) **ಶ್ರೀ ಎಂ.ಸುಭಾನ್ ಸಾಬ್, ಮಾಜಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ತ್ಯಾಗದಹಾಳು ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ**–ರವರು ಮಾತನಾಡುತ್ತಾ, ನೀವು ಅರಣ್ಯ ನಾಶವಾಗದಂತೆ ನೋಡಿಕೊಳ್ಳುತ್ತೀರಿ. ವನ್ಯ ಜೀವಿಗಳ ರಕ್ಷಣೆ ಮಾಡುತ್ತೀರಿ ಎಂದು ಸ್ಕ್ರೀನ್ ಮೂಲಕ ನಮಗೆ ಮಾಹಿತಿ ಕೊಟ್ಟಿರುತ್ತೀರಿ. ಇಲ್ಲಿ ನೂರಾರು ವರ್ಷಗಳಿಂದ ಗಣಿಗಾರಿಕೆ ಮಾಡುತ್ತಾ ಇದ್ದಾರೆ. ಇಲ್ಲಿ ಸುತ್ತ ಮುತ್ತ ತ್ಯಾಗದಹಾಳು, ಜಿಗಿನಹಳ್ಳಿ, ಸ್ವಾಮಿಹಳ್ಳಿ, ಮಲ್ಲಾಪುರ, ಅಂಕಮನಹಾಳ್, ಯರ್ರೇನಹಳ್ಳಿ, ಎಲ್ಲಾ ಗ್ರಾಮಗಳು ಇವೆ. ಮ್ಯಾಂಗನೀಸ್‌ನ್ನು ಕ್ವಾಲಿಟಿ ಮತ್ತು ಕ್ವಾಂಟಿಟಿ ಎರಡೂ ಸರಿಯಾಗಿ ಬರುವಂತೆ ತೆಗೆಯಬೇಕು. ಈ ಭಾಗದಲ್ಲಿ ನೂರಾರು ಲಾರಿಗಳು ಇವೆ. ನಮ್ಮ ಲಾರಿಗಳಿಗೆ ಮೊದಲು ಕೆಲಸ ನೀಡಬೇಕು. ಈ ಹಿಂದೆ ಮ್ಯಾಂಗನೀಸ್‌ನಲ್ಲಿ ಕೆಲಸ ಮಾಡಿದವರ ಸಲಹೆಯನ್ನು ತೆಗೆದುಕೊಳ್ಳಬೇಕು. ಈ ಪ್ರದೇಶದಲ್ಲಿ ಎರಡು ನಿಮಿಷಕ್ಕೆ ಮೂರು ಜನ ಕ್ಷಯ ರೋಗಕ್ಕೆ ಬಲಿಯಾಗುತ್ತಿದ್ದಾರೆ. ಇದರಿಂದ ಆರೋಗ್ಯದ ದೃಷ್ಟಿಯಿಂದ ಆರೋಗ್ಯದ ಮೇಲೆ ಜಾಸ್ತಿ ಒತ್ತು ಕೊಡಬೇಕು. ಎಲ್ಲ ವರ್ಗದ ಜನರಿಗೆ ಅವರವರ ವಿದ್ಯಾರ್ಹತೆಗೆ ತಕ್ಕಂತೆ ಕೆಲಸ ನೀಡಬೇಕು. ನೀವು ಮೈನಿಂಗ್ ಮಾಡಲಿಕ್ಕೆ ನಮ್ಮ ಸಂಪೂರ್ಣ ಸಹಕಾರ ಇದೆ. ರೈತರ ಬಗ್ಗೆ ಕಾಳಜಿ ಇರಲಿ. ಇದರ ಸುತ್ತಲೂ ಇರುವ ಸಜ್ಜೆ, ಮಾವು, ಶೇಂಗಾ, ಮತ್ತು ಜೋಳ ಇವುಗಳಿಗೆ ಹಾನಿಯಾಗದಂತೆ ನೋಡಿಕೊಳ್ಳಬೇಕು. ಮುಂದೆ ಹರತಾಳು ಮಾಡುವುದು, ನಮ್ಮ ಜೊತೆ ವೈರತ್ವ ಬೆಳೆಸುವುದು ಬೇಡ. ಸುತ್ತಲೂ ಇಲ್ಲಿ ಪಂಪ್‌ಸೆಟ್‌ಗಳು ಇವೆ. ಈ ಭಾಗದ ಪಂಪ್‌ಸೆಟ್‌ಗಳಿಗೆ ಆಧ್ಯತೆ ಕೊಡಬೇಕು. ಇದರಿಂದ ರೈತರು, ವರ್ತಕರು, ಲಾರಿ ಮಾಲೀಕರು ಹಾಗೂ ಗಣಿ ಮಾಲೀಕರು ಬದುಕಬೇಕು. ಈ ರೀತಿಯಾಗಿ ಎಲ್ಲಾ ಅಂಶಗಳನ್ನು ಬಳಸಿಕೊಂಡು ಶಿಸ್ತಿನಿಂದ ಮೈನಿಂಗ್ ಮಾಡಲಿಕ್ಕೆ ನಾವು ಸಹಕಾರ ಕೊಡುತ್ತೇವೆ ಎಂದು ತಿಳಿಸಿದರು.

2) **ಶ್ರೀ ಕೆ.ಬಿ.ಉಮೇಶ್, ಉಪಾಧ್ಯಕ್ಷರು, ಯರ್ರಯ್ಯನಹಳ್ಳಿ ಗ್ರಾಮಪಂಚಾಯತಿ**–ರವರು ಮಾತನಾಡುತ್ತಾ, ಮೈನಿಂಗ್ ಸುತ್ತಮುತ್ತಲಿನ ರೈತರಿಗೆ ಬಹಳ ತೊಂದರೆಯಿದೆ. ಕೆಲಸದ ಸಮಸ್ಯೆಯಿದೆ. ಕುಡಿಯುವ ನೀರಿನ ಸಮಸ್ಯೆಯಿದೆ. ಸಿ.ಸಿ.ರಸ್ತೆ, ಒಳಚರಂಡಿ ಯಾವುದೂ ಆಗುತ್ತಿಲ್ಲ. ಶಾಲೆಗಳಲ್ಲಿ ಅಭಿವೃದ್ಧಿ ಕೆಲಸ ಮಾಡಬೇಕು. ಎಲ್ಲಾ ರೀತಿಯಿಂದ ಎಲ್ಲರಿಗೂ ಕೆಲಸ ಕೊಡುತ್ತೀರಿ ಎಂಬ ನಂಬಿಕೆ ನನಗೆ ಇದೆ. ಆದ್ದರಿಂದ ಮೈನಿಂಗ್‌ಗೆ ಅವಕಾಶ ಕೊಡಬೇಕು ಎಂದು ಮನವಿ ಮಾಡಿದರು.

3) **ಶ್ರೀ ಪ್ರವೀಣ್, ಗಾಮ ಪಂಚಾಯತಿ ಸದಸ್ಯರು, ಜಿಗಿನಹಳ್ಳಿ ಗ್ರಾಮ**–ರವರು ಮಾತನಾಡುತ್ತಾ, ಮೈನಿಂಗ್ ಪ್ರಾರಂಭವಾಗುತ್ತಿರುವುದು ಒಳ್ಳೆಯ ಬೆಳವಣಿಗೆ. ಇದರಿಂದ ಉಪಯೋಗ ಆಗಬೇಕು. ನಾನು ಒಂದು ಮನವಿ ಸಲ್ಲಿಸುತ್ತಾ ಇದ್ದೇನೆ. ಈ ಭಾಗದ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದೆ. ಸಿ.ಎಸ್.ಆರ್. ಫಂಡ್‌ನಲ್ಲಿ ಶಾಲೆಗಳಿಗೆ ಶಿಕ್ಷಕರ ವ್ಯವಸ್ಥೆ ಮಾಡಬೇಕು. ಇಲ್ಲಿಯ ಗಣಿಗಾರಿಕೆಯಿಂದ ಬರುವ ಸಿ.ಎಸ್.ಆರ್.ಫಂಡ್‌ನ್ನು ಇಲ್ಲೇ ಬಳಸಬೇಕು. ಪ್ರತಿ ತಿಂಗಳಿಗೆ ಜನರಿಗಾಗಿ ಆರೋಗ್ಯದ ಶಿಬಿರವನ್ನು ಏರ್ಪಡಿಸಬೇಕು. ನೀರಿನ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಡಬೇಕು. ಸ್ಥಳೀಯರಿಗೆ

ಉದ್ಯೋಗದ ಆದ್ಯತೆ ಕೊಡಬೇಕು. ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಳ್ಳಿಗಳ ಖಾಸಗಿ ಮತ್ತು ಸರ್ಕಾರಿ ಜಮೀನುಗಳ ಪಕ್ಕದಲ್ಲಿ ಗಿಡಮರಗಳನ್ನು ನೆಡಬೇಕು. ಶಾಲೆಗಳ ಕಾಂಪೌಂಡ್ ಒಳಗಡೆ ಮತ್ತು ಹೊರಗಡೆ ಗಿಡಗಳನ್ನು ಬೆಳೆಸಬೇಕು ಎಂದು ಮನವಿ ಮಾಡಿದರು.

4) **ಶ್ರೀ ಶಿವಣ್ಣ ತಳವಾರ, ಎಂ.ತುಂಬುರಗುದ್ದಿ ಗ್ರಾಮ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ**-ರವರು ಮಾತನಾಡುತ್ತಾ, ಈ ಪರಿಸರ ಸಾರ್ವಜನಿಕ ಸಭೆಯಿಂದ ನನಗೆ ಒಂದು ಆಸೆ ಇದೆ. ನಾನು ಎಲ್ಲಾ ಮೈನಿಂಗ್‌ನಲ್ಲಿ ಡ್ರೈವರ್ ಕೆಲಸ ಮತ್ತು ಕ್ಲೀನರ್ ಕೆಲಸ ಮಾಡಿದ್ದೇನೆ. ದೇವಗಿರಿಯಿಂದ ರಾಮಗಡದವರೆಗೆ ಕೆಲಸ ಮಾಡಿದ್ದೇನೆ. ಈಗ ಮೈನ್ಸ್‌ನಲ್ಲಿ ಕೆಲಸ ಸಿಗುತ್ತಿಲ್ಲ. ಆದ್ದರಿಂದ ಎಲ್ಲರೂ ದುಡಿಯಲಿಕ್ಕೆ ಬೆಂಗಳೂರು ಹೋಗುತ್ತಿದ್ದಾರೆ. ಆದ್ದರಿಂದ ವಿದ್ಯಾರ್ಹತೆಗೆ ತಕ್ಕಂತೆ ಕೆಲಸ ಕೊಡಬೇಕು. ಎಂ.ತುಂಬುರಗುದ್ದಿ ಗ್ರಾಮದಲ್ಲಿ ನಿಮ್ಮ ಮೈನ್ಸ್ ಕಡೆಯಿಂದ ವಾಲ್ಮೀಕಿ ಭವನ ನಿರ್ಮಾಣವಾಗಬೇಕು. ಸರ್ಕಾರಿ ಪ್ರೌಢಶಾಲೆಯಲ್ಲಿ ಶೌಚಾಲಯ ಮತ್ತು ಮೂಲಭೂತ ಸೌಲಭ್ಯ ಮಾಡಬೇಕು. ಪ್ರೌಢಶಾಲೆಯಲ್ಲಿ 10 ಎಕರೆ ಜಾಗವಿದೆ. ಆದ್ದರಿಂದ ಶೌಚಾಲಯ ಕಟ್ಟಬೇಕು. ಶಾಲಾ ಭವನ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಈ ಪಂಚಾಯತಿಯ ಎಲ್ಲಾ ಹಳ್ಳಿಗಳ ಶಾಲಾ ಮಕ್ಕಳಿಗೆ ಮೈನ್ಸ್‌ನಿಂದ ಸಮವಸ್ತ್ರ ಕೊಡಬೇಕು. ಕ್ರೀಡಾ ಸಾಮಾಗ್ರಿ, ಮತ್ತು ಲ್ಯಾಪ್‌ಟಾಪ್ ನೀಡಬೇಕು. ಈ ಹಿಂದೆ ಕೆಲಸ ಮಾಡಿದ ಎಲ್ಲರಿಗೂ ವಾರದ ಪೂರ್ತಿ ಕೆಲಸ ಕೊಡಬೇಕು ಎಂದು ಮನವಿ ಮಾಡಿದರು.

5) **ಶ್ರೀ ಎಂ.ಮಹಮ್ಮದ್ ಮುಖ್ತಿಯಾರ್, ಜಿಗಿನಹಳ್ಳಿ ಗ್ರಾಮಪಂಚಾಯತಿ**-ರವರು ಮಾತನಾಡುತ್ತಾ, ನಾನು ಸಂಡೂರು ತಾಲ್ಲೂಕಿನಲ್ಲಿ 5 ರಿಂದ 6 ಪರಿಸರ ಸಭೆ ನೋಡಿದ್ದೇನೆ. ಪ್ರತಿಯೊಬ್ಬರೂ ಅಧಿಕಾರಿಗಳು ಕೇವಲ ಭರವಸೆಯನ್ನು ನೀಡುತ್ತಾರೆ. ಗಣಿಗಾರಿಕೆಗೆ ಅವಕಾಶ ಕೊಡಿ, ಆದರೆ ಎಲ್ಲಾ ರೋಡ್‌ಗಳಿಗೆ ನೀರು ಸಿಂಪಡಿಸುವಂತ ಕೆಲಸ ಮಾಡಬೇಕು.

6) **ಶ್ರೀ ಆನಂದ್, ಬಳ್ಳಾರಿ ಜಿಲ್ಲಾ ಗಣಿಕಾರ್ಮಿಕರ ಸಂಘ ಮತ್ತು ಟ್ರೇಡ್ ಯೂನಿಯನ್ ಸೆಂಟರ್ ಆಫ್ ಇಂಡಿಯಾದ ಸದಸ್ಯರು, ಸಂಡೂರು**-ರವರು ಮಾತನಾಡುತ್ತಾ, ಈ ಮೈನಿಂಗ್ ಮಾಡಲು ಅವಕಾಶ ಕೊಡಬೇಕು. ಇದಕ್ಕೆ ನನ್ನ ಆಕ್ಷೇಪಣೆ ಇರುವುದಿಲ್ಲ. ಕೆಲಸ ಇಲ್ಲದೆ 2011 ರಿಂದ ಕಾರ್ಮಿಕರ ಬದುಕು ಬೀದಿಗೆ ಬಂದಿದೆ. ಈ ತರದ ಹೆಚ್ಚು ಗಣಿಗಾರಿಕೆಗಳು ಆಗುವುದರಿಂದ ಕಾರ್ಮಿಕರಿಗೆ ಹೆಚ್ಚು ಹೆಚ್ಚು ಕೆಲಸ ಸಿಗುತ್ತದೆ. ಇದಕ್ಕೆ ನನ್ನ ಸಂಪೂರ್ಣ ಒಪ್ಪಿಗೆ ಇದೆ ಎಂದು ತಿಳಿಸಿದರು.

7) **ಶ್ರೀ ಪ್ರಶಾಂತ್ ಕುಮಾರ್, ಜಿಗಿನಹಳ್ಳಿ ಗ್ರಾಮ**-ರವರು ಮಾತನಾಡುತ್ತಾ, ಇಲ್ಲಿಯ ರೈತರು ಅಂತರ್ಜಲ ನಂಬಿಕೊಂಡು ಜೀವನ ಮಾಡುತ್ತಿದ್ದಾರೆ. ಕಳೆದ 3 ವರ್ಷಗಳಿಂದ ಈ ಭಾಗದಲ್ಲಿ ಮಳೆಯಾಗಿರುವುದಿಲ್ಲ. ಕುಡಿಯುವ ನೀರಿಗೂ ಸಹ ತೊಂದರೆಯಾಗಿತ್ತು. ಇದಕ್ಕೆ ಮೂಲ ಕಾರಣ ಗಿಡಮರಗಳು. ಇದರಿಂದ ಯಾವುದೇ ಮೈನಿಂಗ್ ಮಾಡಿದರೂ ಸಹ ಗಿಡ ಮರಗಳನ್ನು ಬೆಳೆಸುವುದರಲ್ಲಿ ಹೆಚ್ಚು ಗಮನ ಕೊಡಬೇಕು. ಇತ್ತೀಚೆಗೆ ಮಳೆ ಜಾಸ್ತಿಯಾಗಿರುವುದರಿಂದ ಕಾಡುಪ್ರಾಣಿಗಳ ಹಾವಳಿಗಳ ಸಹ ಜಾಸ್ತಿಯಾಗಿದೆ. ರಾತ್ರಿಯ ಸಮಯದಲ್ಲಿ ಕಾಡು ಪ್ರಾಣಿಗಳು ರೈತರ ಬೆಳೆಗಳಿಗೆ ತೊಂದರೆ ಕೊಡುತ್ತಿವೆ. ನಮಗೆ ಕಾಡು ಬೇಕು ಮತ್ತು ಕಾಡಿನ ಪ್ರಾಣಿಗಳು ಬೇಕು. ಆದರೆ ಕಾಡಿನ ಪ್ರಾಣಿಗಳು ನಾಡಿಗೆ ಬರದಂತೆ ಕಾಡಿನಲ್ಲಿಯೇ ಗಿಡಮರಗಳನ್ನು ಬೆಳೆಸಬೇಕು. ಕಾಡಿನಲ್ಲಿ ಹೆವಿ ಬ್ಲಾಸ್ಟಿಂಗ್ ಮಾಡುವುದರಿಂದ ಕಾಡು ಪ್ರಾಣಿಗಳು ನಾಡಿಗೆ ಬರುತ್ತವೆ. ಬ್ಲಾಸ್ಟಿಂಗ್‌ನಿಂದ ಎಲ್ಲಾ ಚೆಕ್‌ಡ್ಯಾಂಗಳು ಮುಚ್ಚಿಹೋಗಿ ನೀರಿನ ತೊಂದರೆ ಆಗಿದೆ. ನೀರಿಗಾಗಿ ಕಾಡುಪ್ರಾಣಿಗಳೂ ರಾತ್ರಿ ಸಮಯದಲ್ಲಿ ರೈತರ ಹೊಲಗಳಿಗೆ ಬರುತ್ತವೆ. ಈಗ ಕಾಡಿನಲ್ಲಿ ನೀರಿನ ಜಲಮೂಲಗಳು ಎಲ್ಲಾ

ಬತ್ತಿಹೋಗಿವೆ. ಕೆರೆಗಳ ಹೂಳು ಎತ್ತುವ ಕೆಲಸ ಆಗಬೇಕು. ಅಂಕಮನಾಳ್ ಕೆರೆಯನ್ನು ಈ ಹಿಂದೆ ತುಂಬಿಸಿದಾಗ ಅದರಿಂದ ಸಂಡೂರಿಗೆ ಕುಡಿಯುವ ನೀರು ಹೋಗುತ್ತಿತ್ತು. ಈಗ ಕೆರೆಗಳು ಎಲ್ಲಾ ಬತ್ತಿಹೋಗಿರುವುದರಿಂದ ಕುಡಿಯುವ ನೀರಿಗೆ ತೊಂದರೆಯಾಗಿದೆ. ಬೇಸಿಗೆ ಸಮಯದಲ್ಲಿ ಬಹಳ ನೀರಿನ ತೊಂದರೆಯಾಗುತ್ತಿದೆ. ಇದಕ್ಕೆಲ್ಲಾ ಕಾರಣ ಮೈನಿಂಗ್. ಮೈನಿಂಗ್ ಮಾಡುವಾಗ ಕೆರೆಗಳ ಹೂಳೆತ್ತುವ ಕೆಲಸ ಆಗಬೇಕು. ಅಂತರ್ಜಲ ಬತ್ತಿಹೋಗದಂತೆ ನೋಡಿಕೊಳ್ಳಬೇಕು. ಸಂಡೂರಿನ ಉತ್ತರ ಭಾಗದಲ್ಲಿ ಮತ್ತು ಪಶ್ಚಿಮ ಭಾಗದಲ್ಲಿ ದೊಡ್ಡ ದೊಡ್ಡ ಗಣಿಗಾರಿಕೆಗಳು ಇವೆ. ಅವುಗಳಿಂದ ಬರುವ ಫಂಡ್‌ನ್ನು ನಮ್ಮ ಈ ಭಾಗದಲ್ಲಿ ಉಪಯೋಗಿಸಬೇಕು. ಸಂಡೂರಿನ ಆ ಭಾಗದಲ್ಲಿ ನಮ್ಮವರು ಕೆಲಸಕ್ಕೆ ಹೋಗಿ ಬರುವುದು ತುಂಬಾ ತಡವಾಗುತ್ತದೆ. ಇದರಿಂದ ಇಲ್ಲಿ ಕೈಗಾರಿಕೆ ಆಗಬೇಕು, ಈ ಮೈನಿಂಗ್‌ನಿಂದ ಜನರಿಗೆ ಅನುಕೂಲವಾಗಬೇಕು. ಅವರ ಲಾಭದಲ್ಲಿ ಈ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕು. ಒಟ್ಟಿನಲ್ಲಿ ಮೈನಿಂಗ್ ಮಾಡುವುದರಿಂದ ಕಾಡು ಬೆಳೆಯಬೇಕು. ಕಾಡಿನ ಪ್ರಾಣಿಗಳು ಉಳಿಯಬೇಕು. ಹಾಗೂ ಜಲಮೂಲಗಳು ಉಳಿಯಬೇಕು. ಈ ಎಲ್ಲವನ್ನೂ ಮಾಡಿಕೊಳ್ಳುವುದಾದರೆ ಮೈನಿಂಗ್‌ಗೆ ಅವಕಾಶ ನೀಡಬೇಕು ಎಂದು ಮನವಿ ಮಾಡಿದರು.

8) **ಶ್ರೀ ಸುಭಾನ್ ಸಾಬ್, ಜೈ ಹಿಂದ್ ಲಾರಿ ಮಾಲೀಕರ ಸಂಘ, ಸಂಡೂರು**-ರವರು ಮಾತನಾಡುತ್ತಾ, ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 3,000 ರಿಂದ 4,000 ಲಾರಿಗಳು ಇವೆ. ಮೈನಿಂಗ್ ಪ್ರಾರಂಭವಾಗುವುದರಿಂದ ಈ ಎಲ್ಲಾ ಲಾರಿಗಳಿಗೆ ಕೆಲಸ ಸಿಗುತ್ತದೆ. ಲಾರಿಗಳು ಹೋಗುವಾಗ ನೀರು ಹೊಡೆದು ರಸ್ತೆಯ ಮೇಲೆ ಧೂಳೂ ಬರದಂತೆ ತಡೆಯಬೇಕು. ಎಲ್ಲಾ ಲಾರಿಗಳಿಗೆ ಕೆಲಸ ಕೊಡಬೇಕು ಎಂದು ಮನವಿ ಮಾಡಿದರು.

9) **ಶ್ರೀ ಖಾಜ ಹುಸೇನ್, ಕಾರ್ಯದರ್ಶಿ, ಕರ್ನಾಟಕ ರಕ್ಷಣಾ ವೇದಿಕೆ, ಸಂಡೂರು**-ರವರು ಮಾತನಾಡುತ್ತಾ, ನಮಗೆ ಮೈನ್ಸ್ ಬೇಕು. ನಮ್ಮ ಮಕ್ಕಳು ಮತ್ತು ಊರಿನವರು ಕೆಲಸಕ್ಕಾಗಿ ಆಂಧ್ರ, ತಮಿಳುನಾಡು ಕಡೆಗೆ ಹೋಗುತ್ತಿದ್ದಾರೆ. ಇಲ್ಲಿ ಮೈನ್ಸ್ ಆಗುವುದರಿಂದ ನಮಗೆ ಲೋಕಲ್‌ನಲ್ಲಿ ಕೆಲಸ ಸಿಗುತ್ತದೆ. ಒಟ್ಟಿನಲ್ಲಿ ಎಲ್ಲರಿಗೂ ಉದ್ಯೋಗ ಸಿಗುತ್ತದೆ. ಒಟ್ಟಿನಲ್ಲಿ ಮೈನ್ಸ್‌ಗೆ ಅನುಮತಿ ಕೊಡಬೇಕು ಎಂದು ಮನವಿ ಮಾಡಿದರು.

10) **ಶ್ರೀ ಗಂಗಪ್ಪ, ಸಂಡೂರು**-ರವರು ಮಾತನಾಡುತ್ತಾ, ಇಲ್ಲಿ ನಿರುದ್ಯೋಗಿಗಳು ಮತ್ತು ಕಾರ್ಮಿಕರು ಬಹಳ ಜನ ಇದ್ದಾರೆ. ಈ ಮೈನಿಂಗ್ ಪ್ರಾರಂಭ ಮಾಡುವುದರಿಂದ ನಮಗೆ ಉದ್ಯೋಗ ಸಿಗುತ್ತದೆ. ಕಾರ್ಮಿಕರಿಗೆ ಒಳ್ಳೆಯದು ಆಗುತ್ತದೆ. ಆದ್ದರಿಂದ ಮೈನ್ಸ್‌ಗೆ ಪರವಾನಿಗೆ ನೀಡಬೇಕು ಎಂದು ತಿಳಿಸಿದರು.

11) **ಶ್ರೀ ಪರಶುರಾಮ, ಗ್ರಾಮಪಂಚಾಯತಿ ಸದಸ್ಯರು, ಡಿ.ಮಲ್ಲಾಪುರ ಗ್ರಾಮ, ಕಾಳಿಂಗೇರಿ ಗ್ರಾಮಪಂಚಾಯತಿ, ಸಂಡೂರು ತಾಲ್ಲೂಕು**-ರವರು ಮಾತನಾಡುತ್ತಾ, ನಮಗೆ ಈ ಮೈನಿಂಗ್ ಆಗುವುದರಿಂದ ಉಪಯೋಗವಿದೆ. ಇಲ್ಲಿ ಇರುವ ಎಲ್ಲಾ ನಿರುದ್ಯೋಗಿ ಜನರಿಗೆ ಕೆಲಸ ಕೊಡಬೇಕು ಎಂಬುದು ನನ್ನ ಮನವಿ ಇದೆ. ಈ ಮೈನ್ಸ್‌ಗೆ. ನನ್ನ ಒಪ್ಪಿಗೆ ಇದೆ ಎಂದು ತಿಳಿಸಿದರು.

12) **ಶ್ರೀ ಚಂದ್ರಪ್ಪ, ಸ್ವಾಮಿಹಳ್ಳಿ ಗ್ರಾಮ, ಮಾಜಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರು, ಸಂಡೂರು**-ರವರು ಮಾತನಾಡುತ್ತಾ, ಈ ಸಭೆಯನ್ನು ಊರಲ್ಲಿ ಮಾಡಬೇಕಾಗಿತ್ತು ಎಂಬುವುದು ನನ್ನ ಅನಿಸಿಕೆ. ಇದರಿಂದ ಈ ಸಭೆಗೆ ಇನ್ನೂ ಹೆಚ್ಚಿನ ಜನರು ಬರುತ್ತಿದ್ದರು. ಆದರೆ ಮೈನಿಂಗ್ ಪರಮಿತಿಯಲ್ಲಿ ಪರಿಸರ ಸಭೆ ಮಾಡಬೇಕೆಂದು ನಿಯಮವಿದೆ ಎಂದು ನನಗೆ ಗೊತ್ತಾಗಿದೆ. ಇಲ್ಲಿ ಮಾಡುತ್ತಿರುವುದು ಒಳ್ಳೆಯದು. ಈ ಹಿಂದೆ ಮಾತನಾಡಿದ ಎಲ್ಲಾ ನನ್ನ ಸ್ನೇಹಿತರು ಗ್ರಾಮಪಂಚಾಯತಿ ಸದಸ್ಯರು, ಮಾಜಿ ತಾಲ್ಲೂಕು

ಪಂಚಾಯತಿ ಅಧ್ಯಕ್ಷರು, ಹಾಗೂ ಸಾರ್ವಜನಿಕರು ಮೈನಿಂಗ್ ಆಗಬೇಕು ಎಂದು ಹೇಳಿದ್ದಾರೆ. ಈ ಮೈನಿಂಗ್‌ನಿಂದ ಸುತ್ತಮುತ್ತಲಿನ ಹಳ್ಳಿಗಳಿಗೆ ನೆರವು ಸಿಗುತ್ತದೆ ಎಂಬುವುದೇ ಅವರ ಭರವಸೆ. ನೇರವಾಗಿ ಜನರಿಗೆ ಉದ್ಯೋಗ ಸಿಗುತ್ತದೆ. ಕೆಲಸಗಳು ಸಿಕ್ಕಾಗ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಮೂಲಭೂತ ಸೌಕರ್ಯಗಳು ಅಭಿವೃದ್ಧಿಯಾಗುತ್ತವೆ. ಆದ್ದರಿಂದ ಮೈನಿಂಗ್‌ಗೆ ಪರವಾನಿಗೆ ಸಿಗಬೇಕು. ನನ್ನ ಉದ್ದೇಶವು ಸಹ ಇಂತಹ ಮೈನಿಂಗ್‌ಗಳಿಗೆ ಅವಕಾಶ ಸಿಗಬೇಕು. ಕಾನೂನುಬದ್ಧವಾಗಿ ಆಗಿ ಮೈನಿಂಗ್ ಮಾಡಿಕೊಂಡು ಪರಿಸರ ಉಳಿಸಬೇಕು. ಸುತ್ತಮುತ್ತಲಿನ ಹಳ್ಳಿಗಳು ಹೇಳುವ ಮೂಲಭೂತ ಸೌಕರ್ಯಗಳ ಕೆಲಸ ಮಾಡಿಕೊಡಬೇಕು. ಅಧ್ಯಕ್ಷತೆಯ ಮೇರೆಗೆ ಹಳ್ಳಿಗಳಿಗೆ ಒಳ್ಳೆಯ ಕೆಲಸಗಳನ್ನು ಮಾಡಬೇಕು. ಮೈನಿಂಗ್ ಮಾಡುವುದರಿಂದ ಸರ್ಕಾರದ ಭೊಕ್ಕಸಕ್ಕೆ ಹಣ ಬರುತ್ತದೆ. ಹಾಗೂ ಬರುವ ಹಣದಿಂದ ಸುತ್ತಮುತ್ತಲಿನ ಹಳ್ಳಿಗಳು ಉದ್ಧಾರವಾಗುತ್ತವೆ. ಮಾನ್ಯ ಜಿಲ್ಲಾಧಿಕಾರಿಗಳು ಈ ಭಾಗದಲ್ಲಿ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಡಬೇಕು. ಎಲ್ಲರ ಅಭಿಪ್ರಾಯದೊಂದಿಗೆ ನನ್ನ ಅಭಿಪ್ರಾಯವು ಸಹ ಮೈನಿಂಗ್ ಆಗಲೀ ಎಂದು ಇರುತ್ತದೆ ಎಂದು ತಿಳಿಸಿದರು.

13) **ಶ್ರೀ ಶಿವಲಿಂಗಪ್ಪ, ಅಧ್ಯಕ್ಷರು, ಡಾ॥ ಬಿ.ಆರ್.ಅಂಬೇಡ್ಕರ್ ಸಂಘ, ಸಂಡೂರು**-ರವರು ಮಾತನಾಡುತ್ತಾ, ಇಲ್ಲಿಯವರೆಗೆ ಮಾತನಾಡಿದ ಎಲ್ಲರೂ ಹೇಳಿದಂತೆ ನನ್ನದೂ ಕೂಡ ಮೈನಿಂಗ್ ಮಾಡಲು ಒಪ್ಪಿಗೆ ಇದೆ. ಈ ಮೈನಿಂಗ್ ಭಾಗದಲ್ಲಿ ಎಸ್.ಸಿ. ಎಸ್.ಟಿ. ಮತ್ತು ಮೈನಾರಿಟಿ ಜನರು ಜಾಸ್ತಿ ಇದ್ದಾರೆ. ಅವರ ಹತ್ತಿರ ಜಮೀನು ಇಲ್ಲ. ಮೈನಿಂಗ್ ಆಗುವುದರಿಂದ ಅವರಿಗೆಲ್ಲಾ ಕೆಲಸ ಸಿಗುತ್ತದೆ. ಮೈನಿಂಗ್ ಬರುವುದರಿಂದ ಎಲ್ಲರಿಗೂ ಕೆಲಸ ಸಿಗುವುದರ ಜೊತೆಗೆ ಮೇಲ್ವರ್ಗದವರ ಅವಲಂಬನೆ ಕಡಿಮೆಯಾಗುತ್ತದೆ. ಹಳ್ಳಿಗಳಲ್ಲಿ ಕೆಳ ಜಾತಿಯವರಿಗೆ ಆಗುತ್ತಿರುವ ಮಾನಸಿಕ ಹಾಗೂ ಆರ್ಥಿಕ ಕಿರುಕುಳ ತಪ್ಪಬೇಕಾದರೆ ಇಂತಹ ಮೈನಿಂಗ್ ಕಂಪನಿಗಳಿಗೆ ಪರವಾನಿಗೆ ನೀಡಬೇಕು. ಈ ಮೈನಿಂಗ್‌ನಿಂದ ಕೆಳವರ್ಗದ ಎಲ್ಲಾ ಜನರ ಆರ್ಥಿಕ ಸೌಲಭ್ಯ ಮತ್ತು ಮಕ್ಕಳಿಗೆ ಶಿಕ್ಷಣ ಸಿಗುತ್ತದೆ. ಪರಿಶಿಷ್ಟ ಜಾತಿಯಲ್ಲಿ ಹಲವಾರು ಗುತ್ತಿಗೆದಾರರು ಇದ್ದಾರೆ. ಆ ಗುತ್ತಿಗೆದಾರರಿಗೆ ಈ ಮೈನಿಂಗ್‌ನಲ್ಲಿ ಕೆಲಸ ಕೊಡಬೇಕು. ನಾನು ಸಹ ಒಬ್ಬ ಗುತ್ತಿಗೆದಾರ. ನಾನು ಗುತ್ತಿಗೆದಾರನಾಗಲು ಮುಖ್ಯಕಾರಣ ಈ ಮೈನಿಂಗ್ ಚಟುವಟಿಕೆ. ಹಳ್ಳಿಗಳಲ್ಲಿ ಜನರಿಗೆ ಕೆಲಸ ಸಿಕ್ಕರೆ ಆರ್ಥಿಕ ಸಬಲೀಕರಣ ಆಗುತ್ತದೆ. ಆದ್ದರಿಂದ ಇಂತಹ ಮೈನಿಂಗ್‌ಗಳಿಗೆ ಅತಿ ಹೆಚ್ಚು ಅವಕಾಶ ಕೊಡಬೇಕು ಎಂದು ಮನವಿ ಮಾಡಿದರು.

14) **ಶ್ರೀ ಬಾಬಾ ಖಲಂದರ್, ತ್ಯಾಗದಹಾಳು ಗ್ರಾಮ**-ರವರು ಮಾತನಾಡುತ್ತಾ, ಈ ಭಾಗದ ಜನರಿಗೆ ಕೆಲಸ ಕೊಡಬೇಕು. ಲಾರಿಗಳಿಗೆ ಕೆಲಸ ಕೊಡಬೇಕು. ಈ ಮೈನ್ಸ್‌ಗೆ ನನ್ನ ಸಂಪೂರ್ಣ ಬೆಂಬಲವಿದೆ ಎಂದು ತಿಳಿಸಿದರು.

15) **ಶ್ರೀ ಬೆಂಡಿ ಕುಮಾರಸ್ವಾಮಿ, ಅಂಕಮನಹಾಳ್ ಗ್ರಾಮ, ಉಪಾಧ್ಯಕ್ಷರು, ಪಂಚಾಯತಿ**-ರವರು ಮಾತನಾಡುತ್ತಾ, ಈ ಮೈನಿಂಗ್‌ಗೆ ಪರವಾನಿಗೆ ಕೊಡಲು ನನ್ನ ಒಪ್ಪಿಗೆ ಇರುತ್ತದೆ ಎಂದು ತಿಳಿಸಿದರು.

16) **ಶ್ರೀ ಓಂಕಾರಪ್ಪ, ಸ್ವಾಮಿಹಳ್ಳಿ ಗ್ರಾಮ**-ರವರು ಮಾತನಾಡುತ್ತಾ, ಈ ಹಿಂದೆ ಮೈನಿಂಗ್ ಕಂಪನಿಗಳ ಮೂಲಕ ಶಾಲೆ ಅಭಿವೃದ್ಧಿ ಮಾಡಲು ಅರ್ಜಿಗಳನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ನೀಡಿರುತ್ತೇವೆ. ಆದರೆ ಆ ಕೆಲಸವು ಇನ್ನೂ ಆಗಿಲ್ಲ. ಈಗ ಮೈನಿಂಗ್ ಪ್ರಾರಂಭ ಮಾಡುವುದರಿಂದ ನನ್ನ ಅಭ್ಯಂತರ ಇಲ್ಲ. ಇದಕ್ಕೆ ನನ್ನ ಒಪ್ಪಿಗೆ ಇದೆ. ಮೈನಿಂಗ್ ಆಗಲೀ ಈಗಾಗಲೇ ನಮ್ಮ ಸದಸ್ಯರು ಕೇಳಿಕೊಂಡಂತೆ ಊರಿಗೆ ಎಲ್ಲಾ ಮೂಲಭೂತ ಸೌಕರ್ಯಗಳು ಸಿಗಬೇಕು. ಕೂಲಿ ಕಾರ್ಮಿಕರಿಗೆ ಒತ್ತು ಕೊಡಬೇಕು. ಮೈನಿಂಗ್‌ನ ಪ್ರದೇಶದ ಹತ್ತಿರದ ಜನರಿಗೆ ಕೆಲಸ ಕೊಡಬೇಕು ಎಂದು ಮನವಿ ಮಾಡಿದರು.

17) **ಶ್ರೀ ರಾಜು, ಅಧ್ಯಕ್ಷರು, ಕರ್ನಾಟಕ ರಕ್ಷಣಾ ವೇದಿಕೆ, ಸಂಡೂರು**-ರವರು ಮಾತನಾಡುತ್ತಾ, ನಾವು ಈ ಹಿಂದೆ ಮೈನಿಂಗ್ ಬೇಕು ಎಂದು ಹೋರಾಟ ಮಾಡುತ್ತಲೇ ಬಂದಿದ್ದೇವೆ. ಕೇಂದ್ರದಿಂದ ಬಂದ ಸಿ.ಸಿ.ತಂಡ ಯು.ಪಿ.ಸಿ. ತಂಡ ಮತ್ತು ಸೆಂಟ್ರಲ್ ಗವರ್ನಮೆಂಟ್ ತಂಡಗಳಿಗೆ ಇಲ್ಲಿ ಮೈನ್‌ಗಳು ಬಂದಾಗಿವೆ. ಮತ್ತೆ ಹೊಸದಾಗಿ ಕಾನೂನು ರೀತಿಯಿಂದ ಪರವಾನಿಗೆ ನೀಡಬೇಕೆಂದು ಅರ್ಜಿ ಸಲ್ಲಿಸಿರುತ್ತೇವೆ. ಕೇಂದ್ರ ತಂಡದ ಜಯಕೃಷ್ಣ ಸಾರ್ ಬಂದಾಗ. ಇಲ್ಲಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದೆ ಎಂದು ಹೇಳಿದರು. ಅದಕ್ಕೆ ನಮ್ಮ ವೇದಿಕೆಯಿಂದ ಅಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆಯ ಮೇಲೆ ಕ್ರಮ ತೆಗೆದುಕೊಂಡು ಸಕ್ರಮವಾಗಿ ನಡೆಯುತ್ತಿರುವ ಗಣಿಗಾರಿಕೆಗಳಿಗೆ ಪರವಾನಿಗೆ ಕೊಡಿ ಎಂದು ಒತ್ತಾಯಿಸಿರುತ್ತೇವೆ. ಕೇಂದ್ರ ತಂಡದವರು ಬಂದಾಗಲೂ ಸಹ ನಾವು ಮನವಿಯನ್ನು ನೀಡಿದ್ದೇವೆ. ಈ ಭಾಗದಲ್ಲಿ ಮೈನಿಂಗ್ ಕೆಲಸ ಬಿಟ್ಟರೆ ಬೇರೇನು ಇಲ್ಲ. ಈ ಭಾಗದಲ್ಲಿ ಕಬ್ಬಿಣದ ಅದಿರು ಜಾಸ್ತಿ ಇರುವುದರಿಂದ ಅಷ್ಟಾಗಿ ಬೆಳೆಗಳು ಚೆನ್ನಾಗಿ ಬರುವುದಿಲ್ಲ. ಆದ್ದರಿಂದ ಇಲ್ಲಿ ಗಣಿಗಾರಿಕೆಗೆ ಅವಕಾಶಗಳು ನೀಡಿದರೆ ರೈತರಿಗೆ ಮತ್ತು ಕೂಲಿಕಾರ್ಮಿಕರಿಗೆ ಕೆಲಸ ಸಿಗುತ್ತದೆ. ಮತ್ತು ಮಾರ್ವ ಮೈನಿಂಗ್ ಕಂಪನಿಯವರು ಇಲ್ಲಿ ಮೈನಿಂಗ್ ಮಾಡಬೇಕೆಂದು ಹಲವಾರು ಸಂಘ ಸಂಸ್ಥೆಗಳು ಒತ್ತಾಯಿಸುತ್ತಿವೆ. ಕುಂಠಿತವಾಗಿರುವ ಈ ಭಾಗದ ಮೂಲಭೂತ ಸೌಕರ್ಯಗಳನ್ನು ಗಮನದಲ್ಲಿಟ್ಟುಕೊಂಡು ಮೈನಿಂಗ್ ಪ್ರಾರಂಭ ಮಾಡಬೇಕು. ಈ ಭಾಗದ ಎಲ್ಲಾ ಗ್ರಾಮಗಳ ಜನರಿಗೆ ಮತ್ತು ಉದ್ಯೋಗಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಮೈನಿಂಗ್ ಕಂಪನಿಯವರಲ್ಲಿ ಕೇಳಿಕೊಳ್ಳುತ್ತೇನೆ. ಈ ಕಂಪನಿಯ ಜಿ.ಎಂ. ಆದಂತಹ ಪವನ್ ಸರ್ ಅವರು ಎಲ್ಲಾ ರೀತಿಯ ಕೆಲಸಕಾರ್ಯಗಳಿಗೆ ಸಹಾಯ ಮಾಡುತ್ತಾರೆ ಎಂಬ ನಂಬಿಕೆ ನನಗೆ ಇದೆ ಎಂದು ತಿಳಿಸಿದರು.

18) **ಶ್ರೀ ಎಂ.ಸತೀಶ್, ಅಧ್ಯಕ್ಷರು, ಪರಿಸರ ಸಂರಕ್ಷಣಾ ವೇದಿಕೆ, ಬಳ್ಳಾರಿ. ಹಾಗೂ ಸದಸ್ಯರು, ಜೀವ ವೈವಿದ್ಯ ಸಮಿತಿ, ಬಳ್ಳಾರಿ**-ರವರು ಮಾತನಾಡುತ್ತಾ, ಈಗಾಗಲೇ ನಮ್ಮ ಗ್ರಾಮಪಂಚಾಯತಿಯ ಸದಸ್ಯರು, ಊರಿನ ಸಾರ್ವಜನಿಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದಂತೆ ಈ ಮೈನಿಂಗ್‌ಗೆ ಅವಕಾಶ ಮಾಡಿಕೊಡಬೇಕು. ಈ ಭಾಗದ ಸುತ್ತಮುತ್ತಲಿನ ಸ್ವಾಮಿಹಳ್ಳಿ, ತುಂಬುರುಗುದ್ದಿ, ಯರ್ರಯ್ಯನಹಳ್ಳಿ, ಜಗದಾಳು, ಹಿರಿಯಾಳು, ಈ ಊರುಗಳಲ್ಲಿ ಹೆಚ್ಚು ಕಡಿಮೆ 20 ಲಕ್ಷ ಜನರು ಕಾಫಿ ತೋಟಕ್ಕೆ ಮತ್ತು ಬೆಂಗಳೂರಿಗೆ ವಲಸೆ ಹೋಗುತ್ತಿದ್ದಾರೆ. ಈಗ ಇರುವ ಮೈನ್ಸ್ ಕಂಪನಿಗಳಿಗೆ ಎಲ್ಲರಿಗೂ ಕೆಲಸ ಕೊಡಲು ಆಗುವುದಿಲ್ಲ. ಈಗ ಈ ತರಹದ ಮೈನಿಂಗ್ ಕಂಪನಿಗಳು ಪ್ರಾರಂಭವಾದರೆ ಅಲ್ಪ ಸ್ವಲ್ಪ ಜನರಿಗೆ ಕೆಲಸ ಕೊಡಬಹುದು. ಇದರಿಂದ ಜನರ ಉದ್ಯೋಗ ಮತ್ತು ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ಈಗ ಮೈನ್ಸ್‌ನವರು ತಮ್ಮ ಪ್ರಸೆಂಟೇಷನ್‌ನಲ್ಲಿ ತೋರಿಸಿದಂತೆ ಒಟ್ಟು 850 ಜನರಿಗೆ ಕೆಲಸ ಸಿಗುತ್ತದೆ. ಇಲ್ಲಿ ಕೆಲಸ ಸಿಗುವುದರಿಂದ ಆರ್ಥಿಕವಾಗಿ. ಶೈಕ್ಷಣಿಕವಾಗಿ ಸಬಲರಾಗುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ಮೈನಿಂಗ್ ಕಂಪನಿಯವರಿಗೆ ಸಲಹೆಗಳನ್ನು ನೀಡಿ ಈ ಭಾಗದ ಜನರಿಗೆ ಅಭಿವೃದ್ಧಿ ಕೆಲಸಗಳು ಸಿಗುವಂತೆ ಮಾಡಬೇಕು. ಮುಖ್ಯವಾಗಿ ಕೆರೆಗಳಿಗೆ ನೀರು ತುಂಬಿಸುವುದು, ಅಂತರ್ಜಲದ ಮಟ್ಟವನ್ನು ಹೆಚ್ಚಿಸುವುದು. ಕಾಡುಪ್ರಾಣಿಗಳು ನಾಡಿಗೆ ಬರದಂತೆ ತಡೆಯುವುದು. ಹಾಗೂ ಗಿಡಮರಗಳನ್ನು ಬೆಳೆಸುವುದನ್ನು ಮಾಡಬೇಕು. ಒಟ್ಟಿನಲ್ಲಿ ಇಲ್ಲಿ ಆರ್ಥಿಕ ಬದಲಾವಣೆ ಮಾಡಲು ಹಾಗೂ ಜನರು ನೆಮ್ಮದಿಯಾಗಿ ಜೀವನ ಮಾಡಲು ಗಣಿಗಾರಿಕೆಗಳು ಬರಬೇಕು. ಈ ಮಾರ್ವ ಮೈನಿಂಗ್ ಗಣಿಗಾರಿಕೆಗೆ ಅವಕಾಶ ನೀಡಬೇಕು. ಒಟ್ಟಿನಲ್ಲಿ ಈ ಗಣಿಗಾರಿಕೆಗೆ ಒಪ್ಪಿಗೆ ಕೊಡಬೇಕೆಂದು ಸಂಡೂರು ತಾಲ್ಲೂಕಿನ ಒಟ್ಟು 40 ವಿವಿಧ ರೀತಿಯ ಸಂಘ ಸಂಸ್ಥೆಗಳು ಸೇರಿ ಮೈನ್ಸ್ ಪರವಾಗಿ ನಾವು ಮನವಿಯನ್ನು ನೀಡುತ್ತಿದ್ದೇವೆ.

19) **ಶ್ರೀ ಹೊನ್ನೂರಸ್ವಾಮಿ, ತುಂಬುರುಗುದ್ದಿ ಗ್ರಾಮ**-ರವರು ಮಾತನಾಡುತ್ತಾ, ನಾನು ಸುಮಾರು 10 ವರ್ಷಗಳ ಕಾಲ ಮೈನಿಂಗ್ ಕಂಪನಿಯಲ್ಲಿ ಕೆಲಸ ಮಾಡಿದ್ದೇನೆ. ಎಲ್ಲರೂ ನಾವು ಆರೋಗ್ಯದ ಬಗ್ಗೆ ಮಾತನಾಡುತ್ತೇವೆ. ಆದರೆ ಇಲ್ಲಿ ಒಂದು ನರ್ಸಿಂಗ್ ಕಾಲೇಜ್ ಇಲ್ಲ. ಆ ನರ್ಸಿಂಗ್ ಕಾಲೇಜ್ ಇಲ್ಲಿ ಆಗಬೇಕು. ಮೈನಿಂಗ್ ಕಂಪನಿಯವರು ವಿದ್ಯಾಭ್ಯಾಸಕ್ಕಾಗಿ ಸುಮಾರು 50 ಕೋಟಿ ಹಣ ಮೀಸಲಿಟ್ಟಿರುವುದಕ್ಕೆ ನಾನು ತುಂಬಾ ಧನ್ಯವಾದಗಳನ್ನು ಹೇಳುತ್ತೇನೆ. ಆದರೆ ಸಂಡೂರು ತಾಲ್ಲೂಕನಲ್ಲಿ ಯಾವ ಮೈನಿಂಗ್ ಕಂಪನಿಗಳು ಸಹ ಉಚಿತ ವಿದ್ಯಾಭ್ಯಾಸವನ್ನು ಕೊಡುತ್ತಿಲ್ಲ. ಮುಂದೆಯೂ ಸಹ ಕೊಡುವುದಿಲ್ಲ. ಈ ಹಿಂದೆ ಸರ್ಕಾರದ ವತಿಯಿಂದ ಒಟ್ಟು 53 ಗಣಿಗಾರಿಕೆಗಳನ್ನು ನಿಲ್ಲಿಸಿದ್ದೀರಿ. ಅಲ್ಲಿ ಇರುವ ಎಲ್ಲರೂ ನಿರುದ್ಯೋಗಿಗಳಾಗಿದ್ದಾರೆ. ಈಗ ನನ್ನ ಮನವಿ ಏನೆಂದರೆ ಈ ಗಣಿ ಪ್ರಾರಂಭವಾದರೆ ಕೆಲಸಕ್ಕೆ ಸೇರುವ ಪ್ರತಿಯೊಬ್ಬರಿಗೆ 60 ವರ್ಷದವರೆಗೆ ಎಲ್ಲಾ ರೀತಿಯ ಆರ್ಥಿಕ ಸೌಲಭ್ಯ ನೀಡಬೇಕು. ಈ ಭಾಗದಲ್ಲಿ ಒಂದು ನರ್ಸಿಂಗ್ ಕಾಲೇಜ್ಆಗಲೀ ಅಥವಾ ಟೀಚರ್ಸ್ ಟ್ರೈನಿಂಗ್ ಕಾಲೇಜ್ ಆಗಲಿ ಆಗಬೇಕು. ಈ ಭಾಗದ ಜನರು ಶಿಕ್ಷಣದಿಂದ ತುಂಬಾ ವಂಚಿತರಾಗಿದ್ದಾರೆ. ನಮ್ಮ ಸಂಡೂರು ತಾಲ್ಲೂಕಿನಲ್ಲಿ ನಿರುದ್ಯೋಗ ಸಮಸ್ಯೆ 2006 ರಿಂದ ಇಲ್ಲ. ಈಗ ನಿರುದ್ಯೋಗ ಸಮಸ್ಯೆ ಬರುತ್ತಿದೆ. ರಾಷ್ಟ್ರ ಮಟ್ಟದಲ್ಲಿ ಹೆಸರುವಾಸಿಯಾದ ಸಂಡೂರಿನ ಗಣಿಗಾರಿಕೆಯಿಂದ ಈ ಭಾಗದ ಜನರಿಗೆ ಕುಡಿಯುವ ನೀರು, ಶಿಕ್ಷಣ ಹಾಗೂ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳು ಸಿಗಬೇಕು. ಪರಿಸರ ಇಲಾಖೆಯ ಮಾರ್ಗಸೂಚಿಯಂತೆ 1 ಎಕರೆ ಗಿಡವನ್ನು ಕಡೆದರೆ 10 ಎಕರೆ ಗಿಡವನ್ನು ನೆಡಬೇಕು ಎಂಬ ನಿಯಮವನ್ನು ಕಂಪನಿಯವರು ಪಾಲಿಸಬೇಕು. ಆದರೆ ಈಗ ಇರುವ ಎಲ್ಲಾ ಗಣಿಗಾರಿಕೆಗಳು ಎಲ್ಲಿ ಗಿಡಮರಗಳನ್ನು ಬೆಳೆಸಿದ್ದೀರಿ ? ಈ ಪರಿಸರ ಸಾರ್ವಜನಿಕ ಸಭೆ ಊರಿನ ಹೊರಗಡೆ ಮಾಡುತ್ತಿರುವುದು ಒಂದು ದುರದೃಷ್ಟಕರ ಸಂಗತಿ. ನಾನು ಹೊಲದಲ್ಲಿ ಕೆಲಸ ಮಾಡುತ್ತಿದ್ದೆ, ಆಗಲೆ ನನಗೆ ಗೊತ್ತಾಗಿದ್ದು. ಈಗ ಪರಿಶುದ್ಧವಾದ ಕುಡಿಯುವ ನೀರನ್ನು ಸಂಡೂರಿನ ಯಾವ ಗಣಿ ಕಂಪನಿಗಳು ನೀಡುತ್ತಿಲ್ಲ. ಸಂಡೂರು ತಾಲ್ಲೂಕಿನಲ್ಲಿ ಎಲ್ಲಾ ರೀತಿಯ ನೈಸರ್ಗಿಕ ಸಂಪತ್ತು ಇದ್ದರೂ ಸಹ ನಿರುದ್ಯೋಗ ಕಡಿಮೆಯಾಗಲಿಲ್ಲ. ಯಾರೂ ಸಹ ವಿದ್ಯಾಭ್ಯಾಸವನ್ನು ಸರಿಯಾಗಿ ಮತ್ತು ಉಚಿತವಾಗಿ ನೀಡುತ್ತಿಲ್ಲ. ನೀವು ವಿದ್ಯಾಭ್ಯಾಸಕ್ಕೆ ದುಡ್ಡನ್ನು ತೆಗೆದು ಇಟ್ಟಿರುತ್ತೀರಿ. ಆದರೆ ಅದನ್ನು ಯಾವ ರೀತಿ ಬಳಕೆ ಮಾಡುತ್ತೀರಿ ಎಂಬುದು ತಿಳಿದಿರುವುದಿಲ್ಲ. ಈ ಹಿಂದೆ ಹಗರಿ ಕೃಷಿ ವಿಶ್ವವಿದ್ಯಾಲಯಕ್ಕೆ ಮೈನಿಂಗ್ ಇಲಾಖೆಯವರು ಕೃಷಿಯ ಬಗ್ಗೆ ಅಧ್ಯಯನ ನಡೆಸಲು ಕೋಟಿಗಟ್ಟಲೆ ಹಣ ಕೊಟ್ಟರು. ಆದರೆ ಫಲವತ್ತು ಆಗಿರದ ಭೂಮಿಯಲ್ಲಿ ಆ ದುಡ್ಡನ್ನು ಹಾಕಿ ಸರ್ಕಾರದವರು ಹಣವನ್ನು ಪೋಲು ಮಾಡಿದರು. ನಾನು ಗಣಿಗಾರಿಕೆಯ ವಿರೋಧಿ ಅಲ್ಲ. ಆದರೆ ವೈಜ್ಞಾನಿಕವಾಗಿ ಗಣಿಗಾರಿಕೆ ಮಾಡಬೇಕೆಂಬುದು ನನ್ನ ಸಲಹೆ. ಕ್ಷಯ ಮತ್ತು ಅಸ್ತಮಾ ರೋಗದಿಂದ 1 ದಿನಕ್ಕೆ 3 ಜನ ಸಾಯುತ್ತಾರೆಂದು ಈ ಸಭೆಯಲ್ಲಿ ಒಬ್ಬರು ಹೇಳಿದ್ದರು. ಆದರೆ ಸಂಡೂರು ತಾಲ್ಲೂಕಿನ ಎಲ್ಲಾ ಜನರಿಗೂ ಕ್ಷಯ ಮತ್ತು ಅಸ್ತಮಾ ರೋಗ ಇದ್ದೇ ಇದೆ. ಇದರಿಂದ ಒಂದು ನರ್ಸಿಂಗ್ ಕಾಲೇಜ್ ಈ ಭಾಗಕ್ಕೆ ಬೇಕಾಗಿದೆ. ನೀವು ಗಣಿಗಾರಿಕೆ ಮಾಡಲು ನಮ್ಮದು ಯಾವ ಅಭ್ಯಂತರ ಇಲ್ಲ. ನಿಮ್ಮ ವ್ಯಾಪ್ತಿಯಲ್ಲಿ ಉತ್ತಮ ರಸ್ತೆಗಳನ್ನು ನಿರ್ಮಾಣ ಮಾಡಬೇಕು. ಅದಿರು ಸಾಗಾಣಿಕೆಗೆ ನೀರನ್ನು ಬಳಕೆ ಮಾಡಿ, ಧೂಳನ್ನು ಕಡಿಮೆ ಮಾಡಿ ಎಂಬುದು ನನ್ನ ಸಲಹೆ. ಗಣಿಗಾರಿಕೆಯನ್ನು ಮಾಡಿ ಉತ್ಪಾದನೆಯನ್ನು ಮಾಡಿ ನಿಮಗೆ ಬರುವ ಲಾಭದಲ್ಲಿ ಶೇ.30% ರಷ್ಟನ್ನು ಮೂಲಭೂತ ಸೌಕರ್ಯಗಳಿಗೆ ಮೀಸಲಿಡಿ ಎಂದು ಮನವಿ ಮಾಡಿದರು.

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತ, ಸದರಿ ಸಭೆಯು ಪರಿಸರ ಸಾರ್ವಜನಿಕ ಸಭೆಯಾಗಿದ್ದು, ಇವರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ ಅಭಿಪ್ರಾಯಗಳನ್ನು ದಾಖಲಿಸಲಾಗಿದೆ. ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗದುಕೊಳ್ಳುವದಿಲ್ಲ, ಈ ಸಭೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲ್ಲಿಸಿರುವ ಮೌಖಿಕ ಮತ್ತು ಲಿಖಿತ ಅಭಿಪ್ರಾಯಗಳನ್ನು ಸಂಗ್ರಹಿಸಿ. ಹಾಗೂ ತಾವುಗಳು ಸಲ್ಲಿಸಿರುವ ಮನವಿಗಳು, ಹೆಚ್ಚಿನ ಸಂಖ್ಯೆಯ ಲಿಖಿತ ಅಭಿಪ್ರಾಯಗಳು/ ಸಲಹೆಗಳು/ಆಕ್ಷೇಪಣೆಗಳನ್ನು ಸ್ವೀಕರಿಸಿದ್ದೇವೆ. ಅದನ್ನು ದಾಖಲಿಸಲಾಗುವುದು. ಈ ಸಭೆಯ ನಡವಳಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಾಖಲಿಸಿ, ಛಾಯಾಚಿತ್ರಗಳ (ಪ್ರತಿಯನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ) ವಿಡಿಯೋ ಇರುವ ಸಿ.ಡಿ. ಗಳ (ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ) ಇವನ್ನು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೇಂದ್ರ ಕಛೇರಿ ಬೆಂಗಳೂರು ರವರ ಮುಖಾಂತರ ಕಳುಹಿಸಿಕೊಡಲಾಗುವದು ಎಂದು ತಿಳಿಸಿದರು.

ಈ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಶ್ರೀ ದೊಡ್ಡಶಾಣಯ್ಯ**
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ

**ಶ್ರೀ ಪಿ.ಎಸ್.ಮಂಜುನಾಥ,ಕ.ಆ.ಸೇ(ಹಿರಿಯ ಶ್ರೇಣಿ)**
ಅಪರ ಜಿಲ್ಲಾಧಿಕಾರಿಗಳು ಹಾಗೂ
ಬಳ್ಳಾರಿ ಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ
ಸಮಿತಿ, ಬಳ್ಳಾರಿ.

## ಅನುಬಂಧ

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

3. ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ಹೊಸದಿಗಂತ (ಕನ್ನಡ) ಹಾಗೂ ದಿ ಟೈಮ್ಸ್ ಆಫ್ ಇಂಡಿಯಾ (ಆಂಗ್ಲ) ಗಳಲ್ಲಿ ದಿನಾಂಕ 26-02-2022 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ದಿನಾಂಕ: 27-02-2022 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯ ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.

4. ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ 25-03-2022 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 29-03-2022 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು **ಅನುಬಂಧ-4** ರಂತೆ ಲಗತ್ತಿಸಿದೆ.

5. ಸಾರ್ವಜನಿಕರಿಂದ ಪ್ರಾದೇಶಿಕ ಕಛೇರಿ ಬಳ್ಳಾರಿಯಲ್ಲಿ ಸ್ವೀಕೃತಿಯಾದ ಒಟ್ಟು 2 ಲಿಖಿತ ಹೇಳಿಕೆ/ ಆಕ್ಷೇಪಣೆಗಳು ಸ್ವೀಕೃತಿಯಾಗಿದ್ದು, ಪರಿಸರ ಸಾರ್ವಜನಿಕ ಸಭೆಯ ಸಮಯದಲ್ಲಿ ಒಟ್ಟು 62 ಲಿಖಿತ ಹೇಳಿಕೆ/ ಆಕ್ಷೇಪಣೆಗಳುಸ್ವೀಕೃತಿಯಾಗಿರಯತ್ತವೆ ಅವುಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

6. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-6** ರಲ್ಲಿ ಲಗತ್ತಿಸಲಾಗಿದೆ.

7. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ. ಗಳ ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ.

**ಶ್ರೀ ದೊಡ್ಡಶಾಣಯ್ಯ**
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ

**ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ)**
ಅಪರ ಜಿಲ್ಲಾಧಿಕಾರಿಗಳು ಹಾಗೂ
ಬಳ್ಳಾರಿ ಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ
ಸಮಿತಿ, ಬಳ್ಳಾರಿ.